## ಕನ್ನಡಕ್ಕೊಬ್ಬರೇ ಸೂರಿ!



ನಿರ್ದೇಶಕರ ಆತ್ಮವಿಶ್ವಾಸಕ್ಕೆ ಒಳ್ಳೆಯ ಉದಾಹರಣೆ ಸೂರಿ! ಯಶಸ್ಸು ಹಾಗೂ ಪ್ರತಿಭೆಯ ಮಟ್ಟಿಗೆ ಸೂರಿಯನ್ನು ಸರಿಗಟ್ಟಬಲ್ಲ ಅಥವಾ ಮೀರಬಲ್ಲ ನಿರ್ದೇಶಕರು ಕನ್ನಡದಲ್ಲಿ ಇರುವರಾದರೂ, ಆತ್ಮವಿಶ್ವಾಸದ ಮಟ್ಟಿಗೆ ಸೂರಿ ಅವರಿಗೆ ಸಾಟಿಯಾಗುವವರು ಕಡಿಮೆ. ಗೆಲುವಿನಂತೆ ಸೋಲನ್ನೂ ಸಹಜವಾಗಿ ಸ್ವೀಕರಿಸುವ, ಕಮರ್ಷಿಯಲ್ ನೆಲೆಗಟ್ಟಿನಲ್ಲಿ ಹೊಸತನಕ್ಕಾಗಿ ನಿರಂತರವಾಗಿ ಹಂಬಲಿಸುವ ನಿರ್ದೇಶಕ ಅವರು. ಆ ಕಾರಣಕ್ಕಾಗಿಯೇ ಅವರ ಹೊಸಚಿತ್ರ 'ಕಡ್ಡಿಪುಡಿ' ಅಪಾರ ನಿರೀಕ್ಷೆಗಳನ್ನು ಮೂಡಿಸಿದೆ.

ವಿಭಿನ್ನ ಶೀರ್ಷಿಕೆ, ಶಿವರಾಜ್‌ಕುಮಾರ್ ಅಭಿನಯ, ಹರಿಕೃಷ್ಣ ಮತ್ತು ಯೋಗರಾಜ ಭಟ್ ಜುಗಲ್‌ಬಂದಿ, ಐಂದ್ರಿತಾ ತೆರೆದ ಬೆನ್ನು– ಹೀಗೆ, ಹಲವು ಕಾರಣಗಳಿಂದ 'ಕಡ್ಡಿಪುಡಿ' ಕುತೂಹಲ ಕೆರಳಿಸಿದ್ದರೂ, ಇದೆಲ್ಲದರ ಹಿನ್ನೆಲೆಯಲ್ಲಿ ಎದ್ದು ಕಾಣುವ ಚಿತ್ರ ಸೂರಿ.

'ಯಾವ ನಟನಾದರೂ ನನ್ನ ಚಿತ್ರ ಒಪ್ಪಿಕೊಂಡ ಮೇಲೆ ತಮ್ಮ ಇಮೇಜಿನ ಹಮ್ಮು ಬಿಡಲೇಬೇಕು' ಎನ್ನುವ ಸೂರಿ, 'ಒಮ್ಮೆ ಚಿತ್ರಿಸಿದ್ದನ್ನು ಇನ್ನೊಮ್ಮೆ ಚಿತ್ರಿಸಲಾರೆ' ಎನ್ನುವ ವ್ಯಸನದ ನಿರ್ದೇಶಕ. ಅವರ ಪಾಲಿಗೆ ಸಿನಿಮಾ ಒಂದು ವೃತ್ತಿಯೂ ಹೌದು, ಬದುಕೂ ಹೌದು. ಕನ್ನಡ ಸಿನಿಮಾದ ನಾಳೆಗಳ ಬಗ್ಗೆ ನಿರೀಕ್ಷೆಗಳು ಜೀವಂತವಾಗಿರಲು ಸೂರಿ ಅವರಂಥ ನಿರ್ದೇಶಕರೂ ಕಾರಣ.

'ಕಡ್ಡಿಪುಡಿ' ಜೂನ್ 7ರಂದು ತೆರೆ ಕಾಣುತ್ತಿದೆ. ಆ ಮೂಲಕ ಸೂರಿ ಕ್ರಿಯಾಶೀಲತೆಯ ಹೊಸ ಅಧ್ಯಾಯವೊಂದು ಸಹೃದಯರ ಎದುರು ಅನಾವರಣಗೊಳ್ಳುತ್ತಿದೆ.



## ಸಿಹಿ-ಕಹಿ ರೂಪಕ

ರೂಪವಂತೆ ಹಾಗೂ ಪ್ರತಿಭಾವಂತೆ ಎನ್ನುವುದು ನಟಿ ದೀಪಾ ಸನ್ನಿಧಿ ಬಗ್ಗೆ ಗಾಂಧಿನಗರದಲ್ಲಿ ಬಳಕೆಯಾಗುವ ವಿಶೇಷಣಗಳು. ದುರದೃಷ್ಟವಂತೆ ಎನ್ನುವ ಮೂರನೆಯ ವಿಶೇಷಣವನ್ನೂ ಆಕೆಯ ಬಗ್ಗೆ ಬಳಸುವುದಿದೆ. ದರ್ಶನ್, ಪುನೀತ್ ಅವರಂಥ ಸ್ಟಾರ್‌ಗಳ ಜೊತೆ ನಟಿಸಿದ ಮೊದಲೆರಡು ಚಿತ್ರಗಳು ದೀಪಾಗೆ ಹೆಸರು ತಂದುಕೊಟ್ಟವು. ಯಶ್‌ಗೆ ಜೋಡಿಯಾಗಿ ನಟಿಸಿದ 'ಜಾನು' ಚಿತ್ರದಲ್ಲೂ ಅವರು ಗಮನ ಸೆಳೆದಿದ್ದರು. ಆದರೆ, ಈ ಹ್ಯಾಟ್ರಿಕ್ ಸಂಭ್ರಮ ಅವರನ್ನು ಆರಕ್ಕೇರಿಸಲಿಲ್ಲ, ಮೂರಕ್ಕೆ ನೆಲೆ ನಿಲ್ಲಿಸಲಿಲ್ಲ.

ಅವಕಾಶಗಳಿಲ್ಲದೆ ಮನೆಯಲ್ಲಿ ಕೂತಿದ್ದ ದೀಪಾಳನ್ನು ಅಹಂಕಾರಿ ಎಂದು ಕೆಲವರು ಕರೆದರು. ದುಬಾರಿ ಸಂಭಾವನೆ ಕೇಳುವ ನಟಿ ಎಂದು ಕೊಂಕು ಮಾತನಾಡಿದವರೂ ಇದ್ದರು. ನಾಯಕರ ಸಂದರ್ಭದಲ್ಲಿ ಇಂಥ ಆಪಾದನೆಗಳೆಲ್ಲ ಅವರ ಸ್ಟಾರ್‌ಗಿರಿಯನ್ನು ಹೆಚ್ಚಿಸುತ್ತವೆ. ಆದರೆ ಹುಡುಗಿಯರ ಸಂದರ್ಭದಲ್ಲಿ ಅವಕಾಶಗಳನ್ನು ಕಿತ್ತುಕೊಳ್ಳುತ್ತವೆ. ಎಲ್ಲವನ್ನೂ ಮೌನದಲ್ಲೇ ಸಹಿಸಿಕೊಂಡ ದೀಪಾ, ಇದೀಗ 'ಲವ್ ಚುರುಮುರಿ' ಎನ್ನುವ ಚಿತ್ರದಲ್ಲಿ ನಟಿಸುತ್ತಿದ್ದಾರೆ. ಹೇಮಂತ್ ಚಿತ್ರದ ನಿರ್ದೇಶಕ. ಚೇತನ್‌ಚಂದ್ರ ನಾಯಕ.

ಪ್ರೇಮ, ಪ್ರಣಯ, ವಿಚ್ಛೇದನದಂಥ ಆಧುನಿಕ ಜಗತ್ತಿನ ಯುವಪೀಳಿಗೆಯ ನಡುವಣ ತವಕ ತಲ್ಲಣಗಳು ಚಿತ್ರದ ಕಥೆ. ಸಿನಿಮಾದುದ್ದಕ್ಕೂ ದೀಪಾ ಪಾತ್ರ ಇರುತ್ತದಂತೆ. ಒಂದರ್ಥದಲ್ಲಿದು ನಾಯಕಿ ಪ್ರಧಾನ ಚಿತ್ರ! ಅಭಿನಯದ ಮೂಲಕವೇ ಗಮನ ಸೆಳೆಯಲು ಬಯಸುವ ನಟಿಗೆ ಹೇಳಿ ಮಾಡಿಸಿದ ಅವಕಾಶ ಇದು. ಈ ನಡುವೆ ದೀಪಾ ಅಭಿನಯಿಸುತ್ತಿರುವ ಇನ್ನೊಂದು ಚಿತ್ರ 'ಸಕ್ಕರೆ'ಯ ಬಗ್ಗೆಯೂ ಗಾಂಧಿನಗರದಲ್ಲಿ ನಿರೀಕ್ಷೆಗಳಿವೆ. ಅಭಯಸಿಂಹ ನಿರ್ದೇಶನದ ಈ ಚಿತ್ರದ ನಾಯಕ ಗಣೇಶ್.

'ಸಕ್ಕರೆ' ಸಿಹಿಯನ್ನೂ 'ಚುರುಮುರಿ' ಖಾರವನ್ನೂ ಸಂಕೇತಿಸುತ್ತದೆ. ಬದುಕಿಗೆ ಸಿಹಿ–ಖಾರ ಎರಡೂ ಬೇಕಲ್ಲವೇ? ಈ ರೂಪಕ ದೀಪಾ ವೃತ್ತಿ ಬದುಕಿಗೂ ಅನ್ವಯಿಸುತ್ತದೆ.

■ ರಘು